BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟ್ಟು.

ತಾರೀಖು 23ನೇ ಮೇ 1876.

ಬೆಂಗಳೂರಲ್ಲಿರುವ ಮೈಸೂರು ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕಿನ ಡಿಪಾಜಿಟ್‌ದಾರುಗಳಿಗೆ ಯ್ತಿದರಿಂದ ರುಜು ಮಾಡಿರುವರು ತಿಳಿಸುವದೇನಂದರೆ,—ಸ೯ 1876ನೇ ಇಸವಿ ಮಾರ್ಚಿ 31ನೇ ಮರುಕ್ಕಂ ವರಿಗೆ ಬಡ್ಡಿ ಯ ಸಾಲೀಯಾಗ ಫಡಬಾ ಬಗ್ಯೆ ತಮ್ಮ ತಮ್ಮ ಪಾಸ್ ಬುಕ್ಕುಗಳನ್ನು ತ್ವರೆಯಾಗಿ ಬೆಂಗಳೂರು ಡಿಸ್ಟ್ರಿಕ್ಟು ಟ್ರೇಜರೀ ಆಫಿಸ್‌ನಲ್ಲಿ ಹಾಜರ್ಮಾಡತಕ್ಕದ್ದು.

A. MADAIYA,
Officer in charge of Bangalore District Govt. Savings' Bank.

KOLAR DISTRICT.

Notice cancelling the certificate granted to Ramaiya under Act XXVII of 1860.

ಕೋಲಾರ್ ಡಿ॥ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಘಾತೀಪಟ್ಟ ಅರಳಿ ಕೃಷ್ಣಪ್ಪನ ಪುದ್ರಿ ಬಾಕೀ 2000 ರೂಪಾಯಿಗಳನ್ನ ವಸೂಲ್ಮಾಡಿ ಕೊಳ್ಳುವದಕ್ಕೆ ಅರಳೀ ಚಿನ್ನಪ್ಪನ ಮಗ ರಾಮಂಣನೆಂಬವನ ಹೆಸರಿಗೆ ಸ೯ 1874ನೇ ಇಸವಿ ಏಸ್ರಿಲ್ 10ನೇ ಮು॥ 11ನೇ ನಂಬರ್ ಸರಟಿಫಿಕೇಟ್ ಕೊಡಲ್ಪಟ್ಟು ಯಿದದ್ದು ಸರಿಯಷ್ಟೆ, ಕೋರ್ಟ್ ಫೀಸ್ ಆಕ್ಟು ಪ್ರಕಾರ ಲೆಖ್ಕ ಹಾಜರ್ ಮಾಡಲಿಕ್ಕೆ ಸದರೀ ರಾಮಂಣನೆಂಬವನು ತಪ್ಪಿ ಹೋಗಿರುವದ್ದರಿಂದಲೂ, ಸರಟಿಫಿಕೇಟ್ ಪಡೆದ ಮೊಬಲಗಿಗಿಂತಾ ಜಾಸ್ತೀ ವಸೂಲ್ ಮಾಡಿಕೊಂಡಿರುವದರಿಂದಲೂ, ಈ ಕಾರಣಗಳಿಂದ ಸದರಹೂ ಸರಟಿಫಿಕೇಟ್ ರದ್ದು ಮಾಡಲ್ಪಟ್ಟು ಯಿದೆ.

ಬತಾರೀಖು 30ನೇ ಮಾಹೆ ಮೇ ಸ೯ 1876ನೇ ಇಸವಿ, ಮೊಕ್ಕಾಂ ಕೋಲಾರ.

Notice regarding an application of Virabhadraiya for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿಕ್ಕ ಬಳ್ಳಾಪುರ ತಾಲ್ಲೂಕು ಮುಂಜನಬೆಲೆ ವೀರಭದ್ರ ದೇವರ ಅರ್ಚಕ ವೀರಣ್ಣನಮಗ ವೀರಭದ್ರಯ್ಯನೆಂಬವನು ಘಾತೀಪಟ್ಟ ತನ್ನ ದೊಡ್ಡತಂದೆ ರುದ್ರಯ್ಯನ ಬಾಬತು ಕೋರ್ಟಿನಲ್ಲಿ ಅಮಾನತ್ತು ಇರುವ 30 ರೂಪಾಯಿಗಳು ವಸೂಲು ಮಾಡಿಕೊಳ್ಳತಕ್ಕ ಬಗ್ಯೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರ್ಟಿಫಿಕೇಟ್ ಕೊಡಿಸಿ ಕೊಡಬೇಕೆಂದು ಗುಜರಾಯಿಸಿದ ಅರ್ಜಿಯು ಸ೯ ಮು॥ ಜೂಲೈ 5ನೇ ತಾರೀಖಿನಲ್ಲಿ ವಿಚಾರಿನಲ್ಲಪಡುತ್ತಾದ್ದರಿಂದ ಇದರಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಅಂತಾವರೆಲ್ಲಾ ಆ ತಾರೀಖಿಗೆ ಸರಿಯಾಗೆ ಕೋರ್ಟು ಯಿರುವ ಸ್ಥಳಕ್ಕೆ ಬಂದು ರೂಬರೂ ಹಾಜರಾಗಿ ಸ್ಥಿರಪಡಿಸಿ ಕೊಳ್ಳತಕ್ಕದ್ದಾಗಿರುತ್ತೆ.

ತಾರೀಖು 29ನೇ ಮಾಹೆ ಮೇ 1876ನೇ ಇಸವಿ ಮೊಕ್ಕಾ ಕೋಲಾರ್.

Notice regarding an application of Venkatramanaiya for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕ ಬಳ್ಳಾಪುರ ತಾಲ್ಲೂಕು ಮುಂಜೇನಹಳ್ಳಿ ಕೊರಚರ ವೆಂಕಟರಮಣ್ಯೆಯನ ಮಗ ಪುಟ್ಟಲ ವೆಂಕಟರಮಣ್ಯೆಯ ನೆಂಬವನು ಘಾತೀ ಪಟ್ಟ ತನ್ನ ತಂದೆ ಹೆಸರಿನ ಉದ್ರಿ ಬಾಕೀಗಳು ರೂಪಾಯಿಗಳು ವಸೂಲ್ಮಾಡಿಕೊಳ್ಳಲು 60ನೇ ಇಸವಿ 27ನೇ ಆಕ್ಟು ಪ್ರಕಾರ ತನ್ನ ಹೆಸರಿಗೆ ವಾರಸು ಸರಟಿಫಿಕೇಟ್ ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜೀಯು ಸ೯ ಮಜಕೂರು ಜೂಲೈ 12ನೇ ತಾರೀಖಿನಲ್ಲಿ ವಿಚಾರಣೆ ಮಾಡಲ್ಪಡುತ್ತಾದ್ದರಿಂದ ಯಿದರ ವ್ಯಾಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ಯಿರುವ ಸ್ಥಳಕ್ಕೆ ಬಂದು ರೂಬರೂ ಹಾಜರಾಗಿ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದಾಗಿರುತ್ತೆ.

ತಾರೀಖು 30ನೇ ಮಾಹೇ ಮೇ 1876ನೇ ಇಸವಿ ಮೊಕ್ಕಾಂ ಕೋಲಾರ

P. N. PURNAIYA,
For Dy. Commr.

TUMKUR DISTRICT.

Notice regarding an application of Nanja for a certificate under Act XXVII of 1860.

ತುಮಕೂರು ಡಿ॥ ಡಿ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಬೆಳಿಗೆರೆ ಗ್ರಾಮದ ವಾಸಸ್ಥನಾಗಿದ್ದ ಪಾತೀ ಯಾದ ದೊಡ್ಡಗುಡ್ಡಾ ಯಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 300 ರೂಪಾಯಿಗಳು, ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಯಿಸವಿ 27ನೇ ಆಕ್ಟ್ ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ, ಯಿವನ ಮಗ ನಂಜಾ ಯಂಬುವನು ದಾಖಲ್‌ಮಾಡಿ ಯಿರುವ ಅರ್ಜೀಯನ್ನು 1876ನೇ ಯಿಸವಿ ಜೂ ತಿಂಗಳು 20ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇ ವಾದ್ದರಿಂದ, ಯಿದಕ್ಕೆ ತಕರಾರ್ ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 18ನೇ ಮಾಹೆ ಮೇ 1876ನೇ ಯಿಸವಿ, ಮೊಕ್ಕಾಂ ತುಮಕೂರು.

Notice regarding an application of Tipu Husen for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ,—ತುಮಕೂರು ತಾಲ್ಲೂಕು ಈಸಬಾ ತುಮಕೂರು ಗ್ರಾಮದ ವಾಸಸ್ಥನಾಗಿ ಯಿದ್ದ ಪಾತ್ತೀ ಯಾದ ಪಾಪಿ ಅಂಗಡಿ ಬಾಬಾಮಿಯ್ಯ ಯಂಬುವನಿಗೆ ಯಿತರರಿಂದ ಬರಬೇಕಾಗಿರುವ 1000 ರೂಪಾಯಿಗಳು, ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಯಿಸವೀ 27ನೇ ಆಕ್ಟ್ ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ, ಯಿವನ ಮಕ್ಕಳಾದ 1ನೇ ಹ್ಯಾಜಲಾ 2ನೇ ಜೈನಬಿ ಯಿವರು ಮೈರಾನದ್ದರಿಂದ ಯಿವರ ಸೋದರಮಾವ ಟೀಪು ಹುಶೇನ್ ಯಂಬುವನು ದಾಖಲ್‌ಮಾಡಿ ಯಿರುವ ಅರ್ಜೀಯನ್ನು 1876ನೇ ಯಿಸವಿ ಜೂ ತಿಂಗಳು 20ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇ ವಾದ್ದರಿಂದ, ಯಿದಕ್ಕೆ ತಕರಾರ್ ಮಾಡುವರ್ಯಾರಾದರು ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 22ನೇ ಮಾಹೆ ಮೇ 187 ನೇ ಯಿಸವಿ, ಮೊಕ್ಕಾಂ ತುಮಕೂರು.

ಬಾಜೂದಲ್ಲಿ ನಮೂದಾಗಿರುವ ಆಸಾಮಿಗೆ 1860ನೇ ಇಸವಿ 27ನೇ ನಂಬರ್ ಆಕ್ಟ್ ಆಧಾರದ ಮೇಲೆ ಕೊಟ್ಟಿರುವ ಸರಟಿಫಿಕೇಟನ್ನು ಸದರೀ ಯವಳು 1875ನೇ ಇಸವಿ ಏಪ್ರೆಲ್ 27ನೇ ತಾರೀಖಿನಲ್ಲಿ ಸದರೀ ಇಸವಿ ೫॥ ಮಿ॥ 7ನೇ ನಂ. ಮೊಕದ್ದಮ್ಮು, ಕೊರಟಗೆರೇ ತಾಲ್ಲೂಕು ರಾಂಪುರದಲ್ಲಿ ವಾಸವಾಗಿದ್ದು ಫೌತೀಯಾದ ನಾಗಪ್ಪನ ಹೆಂಡತಿ ಪುಟ್ಟಕ್ಕನಿಗೆ ಮೈನರಾದ ಅವಳ ಮಗಳು ಜೆನ್ನಮ್ಮನಿಗಾಗಿ.

ವಾಯಿದೆಗೆ ಸರಿಯಾಗಿ ಸರಟಿಫಿಕೇಟಿನ ಆಧಾರದ ಮೇಲೆ ವಸೂಲ್ ಮಾಡಿದ ಹಣಗಳ ಲೆಖ್ಕಗಳನ್ನ ಹಾಜರ್ ಮಾಡದ ಸಬಬ್ ಇದರಿಂದ ರದ್ದು ಮಾಡಿ ಯಿರುತ್ತೆ.

ತಾರೀಖು 23ನೇ ಮೇ 1876ನೇ ಇಸವಿ, ಮೊಕ್ಕಾಂ ತುಮಕೂರ್.

E. S. LUDLOW,
Offg. Dy. Commr.

ಮೈಸೂರು ರೆವಿನ್ಯೂ ಸರ್ವೇ ಇಲಾಖಾ.

ತಾರೀಖು 25ನೇ ಮೇ 1876.

ಮೈಸೂರು ಸರ್ವೆ ಕಮ್ಮಿಷನರ್ ಕರ್ನಲ್ ಆಂಡರ್ಸನ್ ಸಾಹೆಬರು ಮೈಸೂರು ರೆವಿನ್ಯೂ ಸರ್ವೆ ಇಲಾಖಾ ಚಾರ್ಜನ್ನು ಆಫೀಂಗೆ ಸರ್ವೇ ಕಮ್ಮಿಷನ್ನರ್ ಹೀಟನ್ ಸಾಹೆಬರಿಗೆ ಮೇ 15ನೇ ತಾರೀಖಿನಲ್ಲಿ ಆಫೀಸ್ ಕಾಲಾನಂತರ ಕೊಟ್ಟರು.

W. C. ANDERSON,
Survey. Commr., Mysore.

HASSAN DISTRICT.

... calling upon claimants of the late Maity Perumal to present themselves before the Manjarabad Tahsildar and receive the Patta of the Coffee ... nd standing in the name of the above individual.

ಹಾಸನ ಡಿಸ್ಟ್ರಿಕ್ಟ್. ಡೆಪ್ಯುಟಿ ಕಮಿ ಷನರವರ ಕಚ್ಚೇರಿಯಿಂದ.

ಇಕ್ಕೇರಿ ವಾಗಣಿ ಸಕಲೇಶಪುರಕ್ಕೆ ಕೀರಿದ ಈ ಕೆಳಗೆ ನಮೂದಾಗಲ್ಪಡುವ ಕಾಫೀ ಹಿತ್ತಲಿಗೆ ಬೆರ್ಚಿ ರಲ್ಲು ಮೇಟಿ ರಮಾಳು ಯಂಬವನ ಹೆಸರಿಗೆ ಕೊಟ್ಟುಯಿದ್ದ ಡಿಸ್ಟ್ರಿಕ್ಟ್ 16ನೇ ... ಹಾಲೀ ಟೀಪ್ ಕಮ್ಮಿಷನರ್ ಕಾರ್ಟರ್ ಸ್ಮಿತ್ ನಿಃ ಆಫೀಸ 87-17ನೇ ನಂಬರು ... ಖಾಲಾಗಿ

ತ್ತೆ. ಯಿದನ್ನು ಬಟವಾಡೆ ಮಾಡುವಕ್ಕೆ ಸದರೀ ಪಟ್ಟೀದಾರ ಪವತೀಯಂತಲೂ (ವಾರಸ್‌ದಾರು) ಯಿರತಕ್ಕದ್ದು ಗೊತ್ತಿಲ್ಲವೆಂತಲೂ ವಗೈರೇ ಆ ತಾಲ್ಲೂಕು ಆಮಿಲರು ಈ ಮಾಹೇ 4ನೇ ಮರ್ಕುಂ 141—162ನೇ ನಂಬರು ರಿಪೋರ್ಟು ಕೊಟ್ಟುಯಿದ್ದರಾಗಿ,

ಯಿದರಿಂದ ಪ್ರಕಟಿಸುವದೇನಂದರೆ ಸದರೀ ಪಟ್ಟೀದಾರನ ಮುಖ್ಯ ವಾರಸ್‌ದಾರು ಯಾರಾದರೂ ಯಲ್ಲಿಯಾದರೂ ಯಿದ್ದದ್ದಾದರೆ ಈನೋಟೀಸು ತಾರೀಖು ಲಾಗಾಯಿತು 1½ ತಿಂಗಳ್ಗುವಳಗಾಗಿ ಮಂಜರಾಬಾದು ತಾಲ್ಲೂಕು ಆಮಿಲರಲ್ಲಿ ಹಾಜರಾಗಿ ಪಟ್ಟೀಯನ್ನು ಕ್ರಮಪ್ರಕಾರ ತೆಗದುಕೊಳ್ಳಬಹುದು ಅದಕ್ಕೆ ತಪ್ಪಿದರೆ ಸದರೀ ಪಟ್ಟಿಯು ಕ್ಯಾನ್ಸಲ್ ಆಗಿ ಅದೆರಲ್ಲಿ ಕಂಡ ಭೂಮಿಯು ಗವರ್ಮೆಂಟ್ಗೆ ಶೇರುತ್ತೆ ತಿಳಿಯುವದು.

ನಂಬರು 25ನೇ ಹೊಲಗೇರಿ ಸಂದಿನ ಅಗಳು ಹಿತ್ತಲು ಯಿದರ ಚಕ್ಕು ಬಂದಿ.

ಪೂರ್ವಕ್ಕೆ—ಮರಿಲಿಂಗನ ಹಿತ್ತಲು ಸಂದು ಆಗಳು
ದಕ್ಷಿಣಕ್ಕೆ—ಮರಿಲಿಂಗನ ಹಿತ್ತಲು ಸಂದು ಬೇಲಿ
ಪೂರ್ವ ಪಶ್ಚಿಮ ಗಜಾ 4
ಯಿಕರ್ಕೆ 0 ರೋಡ್ 0 ಪೋಲ್ 3 ಗಜಾ 21½.
ಪಶ್ಚಿಮಕ್ಕೆ—ಬಂಗಲೆಗೆರೆ
ಉತ್ತರಕ್ಕೆ—ಕಳ್ಳೀಪೇಲಿ.
ದಕ್ಷಿಣೋತ್ತರ 28, ಸಲೆಗಜಾ 112

ಬತಾರೀಖು 22ನೇ ಮಾಹೇ ಮೇ ಸ೯ 1876ನೇ ಇಸವಿ.

H. E. MOTTET,
Dy. Commr.

KADUR DISTRICT.

Notice of sale of occupied lands in the Chikmagálur and Banavar Taluks on the undermentioned dates in satisfaction of Government dues.

ಕಡೂರು ಡಿಸ್ಟ್ರಿಕ್ಟ್ ಡೆ॥ ಕ॥ ಕೋರ್ಟಿನಿಂದ.

1. ಇದರಿಂದ ತಿಳಿಸಲ್ಪಡುವದೇನಂದರೆ, ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿರುವರಿಂದ ಸಲ್ಲತಕ್ಕ ಜಮ್ಮಾ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಪ್ತಾದ್ದರಲ್ಲಿ ವಿಂಗಡಿಸಲ್ಪಟ್ಟ ಈ ಕೆಳಗೆ ಕಂಡ ಜಮ್ಮಿಗಳಲ್ಲಿ ಹಾಲೀ ರಿಜಿಸ್ಟರಾದ ಜಮ್ಮಿ ಹಿಡುವಳೀದಾರನ ದರೋಬಸ್ತು ಹೆಕ್ಕುದಾರೀಗಳೂ, ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ಬಾಣಾವರ ತಾಲ್ಲೂಕು ಆಯಾಯ ಗ್ರಾಮದಲ್ಲಿ. ಚಾಲ್ತೀ ಇಸವಿ ಜೂ೯ ಮಾಹೆ ಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು, ಹರಾಜು ಆಯಾ ಗ್ರಾಮದಲ್ಲಿ ಹಿಡುವಳೀ ಸಮಿಾಪ ಹಂಚಿಕೆಗೆ ಆರಂಭಿಸುವದು. ಸದರೀ ಹಕ್ಕುಗಳ ವಿಿಷ್ಟ್ಯಾಂಕಗಳೊಡನೆ ಜಮ್ಮಿಗಳು ಚಿಕ್ಕ ದರಖಾಸ್ತುದಾರಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮ್ಮಿಗಳಿಗೆ 1876ನೇ ಇಸವಿ ಪೂರಾ ಆಗಲಿ (ಯಿದ ಕಾಲಕ್ಕಾಗಲಿ ಸಂದರ್ಭ ಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ಪಟ್ಟಿಯಲ್ಲಿ ತಪ್ಪಿಲ್ವಾರ್ ತೋರಿಸಲ್ಪಟ್ಟ ಪ್ರಕಾರ 886—2-9 ರೂಪಾಯಿಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜುಕಾಲದಲ್ಲಿ ತಿಳಿಸಲ್ಪಡುತ್ತೆ. ಜಮ್ಮಿ ವಗೈರೆಗಳ ತಪಸೀಲ್ ಬಗ್ಗೆ ಮಾಹೆ ಮಜಕೂರ್ 20ನೇ ಮರ್ಕುಂ ಮೈಸೂರು ಗೆಜೆಟ್ 242—244 ಪುಟಗಳನ್ನು ನೋಡತಕ್ಕದ್ದು.

Notice of sale of certain occupied lands in the Lakvalli and Banavar Taluks in satisfaction of Government dues.

1. ಇದರಿಂದ ತಿಳಿಸಲ್ಪಡುವದೇನಂದರೆ—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರಾದ ಕೆಳಗೆ ನಮೂದಿರುವರಿಂದ ಸಲ್ಲತಕ್ಕ ಜಮ್ಮಿ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಜಪ್ತಾದ್ದರಲ್ಲಿ ವಿಂಗಡಿಸಲ್ಪಟ್ಟ ಈ ಕೆಳಗೆ ಕಂಡ ರಿಜಿಸ್ಟರಾದ ಜಮ್ಮಿ ಹಿಡುವಳೀದಾರನ ದರೋಬಸ್ತು ಹಕ್ಕುದಾರೀಗಳೂ ಕಡೂರು ಡಿಸ್ಟ್ರಿಕ್ಟ್ ಆಯಾ ಗ್ರಾಮದಲ್ಲಿ ಚಾಲ್ತೀ ಇಸವಿ ಜೂ೯ ಮಾಹೆಯಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಹರಾಜು ಸಮಿಾಪ ಹಳ್ಳಿಯಲ್ಲಿ ಆರಂಭಿಸುವದು. ಸದರೀ ಹಕ್ಕುಗಳ ವಿಿಷ್ಟ್ಯಾಂಕಗಳೊಡನೆ ಜಮ್ಮಿಗಳು ಯಿಸಲ್ಪಡುವದು.

2. ಕ್ರಯದಾರನು ಜಮ್ಮಿಗಳಿಗೆ 1876ನೇ ಇಸವಿ ಪೂರಾ ಆಗಲಿ (ಯಿದ ಕಾಲಕ್ಕಾಗಲಿ ಸಂದರ್ಭ ಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ಪಟ್ಟಿಯಲ್ಲಿ ತಪ್ಪಿಲ್ವಾರ್ ತೋರಿಸಲ್ಪಟ್ಟ ಪ್ರಕಾರ ಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ಕಾಲದಲ್ಲಿ ತಿಳಿಸಲ್ಪಡುತ್ತೆ.

ತಾಲೂಕು	ಗ್ರಾಮ	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು	ಜಮೀನು ತರಿಯೇ ಖುಷ್ಕಿಯೇ ಯಾ ಬಾಗಾಯಿತೆ ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದ ಜಮೀನು ಎಷ್ಟು ಯಾವದಾದರೂ ಇರುತ್ತವೆಯೇ.	ಜಮೀನು ನಂಬರ್	ಹೆಸರು	ಅಂದಾಜ್ ಬೀಜವರಿ ಖಂ.	ಕೂ.	ಪ.	ಕಂದಾಯ ರೂ.	ಆ.	ಪೈ.	ಸನ್ 1875ನೇ ಇಸವಿಗೆ ಕಂದಾಯ ಕೊಡಲಿಕ್ಕೆ ತಪ್ಪಿದ ಜಮೀನು (ಬಾಕಿ) ಎಷ್ಟು ಇತ್ತು			ಸೊಲ್ಲಗು
ಹೈಕ್ಕ	ಶಿಂಗಾಪುರ	ನರಸಂಭಟ್ಟನ ಹೆಂಡತಿ ಸುಬ್ಬಮ್ಮ	ತರೀ ಜಮೀನು	17	ಗದ್ದೆ	0	5	0	13	3	10				
				16	ಡಿಟೋ	0	2	12	6	10	0	0	8	0	
				1	ಡಿಟೋ	0	5	0	1	5	2				
	ಕರಿಕೆನರು	ಬನವನಹಳ್ಳಿ ಕೃಷ್ಣಪ್ಪ	ಬಾಗಾಯತು ಜಮೀನು	1	ತೋಟ	(100)		0	4	0	0				
				38	ಡಿಟೋ	(198)		0	7	7	10	1	0	0	
				8	ಡಿಟೋ	(1200)		0	48	0	0				
				22	ಡಿಟೋ	(500)		0	20	0	0				
	ಆಡುವಳ್ಳಿ	ಜಲುವ ಜೋಯಿಸ	ತಾಕು	0	0	0	0	0	4	12	6				
			ತರೀ ಜಮೀನು	28	ಗದ್ದೆ	4	0	0	7	10	4	1	0	0	
			ಬಾಗಾಯತು	0	ತೋಟ	6	16	0	35	5	9				
	ಮಜೇರಿ	ಅಳಿಂಗೈಯ್ಯು ಚೆನ್ನವೀರನ ಬನವ ಸಹಾ	ಖುಷ್ಕೀ ಜಮೀನು	28	ಹೊಲ	0	2	0	2	1	4				
				29	ಡಿಟೋ	0	2	0	2	1	4				
				30	ಡಿಟೋ	0	2	0	2	1	4	1	0	0	
				31	ಡಿಟೋ	0	2	0	2	1	4				
				32	ಡಿಟೋ	0	2	0	2	1	4				
				33	ಡಿಟೋ	0	2	0	2	1	4				
				34	ಡಿಟೋ	0	2	0	2	1	4				
				35	ಡಿಟೋ	0	2	0	2	1	4				
	ಅರೇಹಳ್ಳಿ	ಗರಡನ ಗಿರಿಯ ಸಂಜೈಯನ ಸುಬ್ಬಯ್ಯ	ಡಿಟೋ	2	ಡಿಟೋ	0	0	8	0	9	4				
			ಬಾಗಾಯತು ಜಮೀನು	39	ತೋಟ	0	5	0	4	11	8	1	8	0	
	ಡಿಟೋ	ಗರಡನಗಿರಿ ವೆಂಕಟರಮಜೈಯ	ಖುಷ್ಕೀ ಜಮೀನು	52	ಹೊಲ	0	2	0	3	12	6				
			ಬಾಗಾಯತ್ ಜಮೀನು	0-1	ತೋಟ	0	5	0	1	11	8	2	0	0	
	ಕುದೂರು	ಗರಡನಗಿರಿ ಖಂ	ಡಿಟೋ	116-1	ಡಿಟೋ	0	1	0	1	10	2				
		ಡಿ ಾಯಪ್ಪ		109	ಡಿಟೋ	0	7	8	2	9	10	3	8	0	
	ನಾಗಸಮುದ್ರ	ಚಿ ಾರಾಮೈಯ	ತರೀ ಜಮೀನು	120-121	ಗದ್ದೇ	1	3	12	19	1	9				
			ಖುಷ್ಕೀ ಜಮೀನು	19	ಹೊಲ	0	5	0	4	15	8	2	0	0	
	ಮೆದನೀಪುರ	ಡಿಟೋ	ಡಿಟೋ	141	ಡಿಟೋ	0	4	8	3	14	7				
			ಡಿಟೋ	115 ಪೈಕಿ-2	ಡಿಟೋ	0	4	4	2	7					
			ಡಿಟೋ	4	ಡಿಟೋ	0	2	0	2						
			ಡಿಟೋ	18	ಡಿಟೋ	0	6	0							

ಸನ್ 1863ನೇ ಇ॥ ಕಾಫ್ಲಿ ಪಟ್ಟಿದು

ಹರಾಜು ತಾರೀಖುಗಳು.

ಶಿಂಗಾಪುರ ಬಾಕೀದಾರನ ಹಿಡುವಳ್ಳೀ ಹರಾಜು 24-6-76.
ಕರಿಕೆನರು ಬಾಕೀದಾರನ ಹಿಡುವಳ್ಳೀ ಹರಾಜು 26-6-76.
ಆಡುವಳ್ಳಿ ಬಾಕೀದಾರನ ಹಿಡುವಳ್ಳೀ ಹರಾಜು 27-6-76.
ಮಜೇರೀ ಬಾಕೀದಾರನ ಹಿಡುವಳ್ಳೀ ಹರಾಜು 23-6-76.
ಅರೇಹಳ್ಳಿ ಬಾಕೀದಾರನ ಹಿಡುವಳ್ಳೀ ಹರಾಜು 24-6-76.
ಕುದೂರು ಬಾಕೀದಾರನ ಹಿಡುವಳ್ಳೀ ಹರಾಜು 26-6-76.
ನಾಗಸಮುದ್ರ ಬಾ॥ ಹಿಡುವಳ್ಳೀ ಹರಾಜು 27-6-76.
ಮೆದನೀಪುರ ಬಾಕೀದಾರನ ಹಿಡುವಳ್ಳೀ ಹರಾಜು 27-6-76.

MAHOMED SALIH,
For Dy.

Notice of a highway robbery committed on the evening of the 26th May 1876 on Swami Rao, Accountant of the Chitaldroog District, while going from Birur to Kadur, when property worth of Rs. 964—4—0 is said to have been carried away. A reward of Rs. 100 is offered by the owner for the detection of the property.

ಯಾದಾಸ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಅಕ್ಕೌಂಟೆಂಟ್ ಸ್ವಾಮಿರಾಯರು, ಚನ್ನಗಿರಿಯಿಂದ ಮಾಹೇ ಮಜಕೂರ್ ತಾರೀಖು 26ನೇ ಸಾಯಿಂಕಾಲ 5 ಘಂಟೇಯಲ್ಲಿ ಬಿರೂರು ಹೊರಟು ಕಡೂರಿಗೆ ಬರುವ ದಾರೀಯಲ್ಲಿ 6½ ಘಂಟೇ ಹೊತ್ತಿನಲ್ಲಿ ಸುಮಾರು 7—8 ಜನ ಕಳ್ಳರು ಬಂದು ಬೆದರಿಸಿ ತನ್ನಲ್ಲಿದ್ದ ಮಾಲ್‌ಗಳನ್ನ ಜೋರೀ ಮಾಡಿಕೊಂಡು ಹೋದಂತೆ ಚಿಕ್ಕ ಮಗಳೂರು ತಾಲ್ಲೂಕು ಆಮಿಲರವರ ಸಮಕ್ಷಮ ಫಿರಯಾದಿಯು ಬರಸಿದ ಮಾಲ್ ತಪಸೀಲ್ ಪಟ್ಟ.

	ರೂ.	ಆ.
ಗಂಜು ಕುದುರೆ ಕೆಂಪುವರ್ನ ಹಿಂಭಾಗದ ಯಡದ ಕಾಲು ಖುರದಬಳಿ ಬಿಳಪಾಗಿ ಯಿರುತ್ತದೆ, ಇದರ ಕ್ರಯ ಸುಮಾರು	25	0
ಯಿದರಮೇಲೆ ಹಾಕ್ಕಿದ್ದ ಸಾಮಾನು ಬಗೆ ಕರೇ ಬನಾತು ಹಳದಿ ಮಧ್ಯೆ ಹಾಕಿ ಸುತ್ತಲೂ ಕೆಂಪು ಬಟ್ಟೆ ಹಾಕಿದ ಖೋಗೀರು ವಂದಕ್ಕೆ	2	0
ಇದರ ಮೇಲೆ ಹಾಕಿ ಯಿದ್ದ ಹೊಸಧೋತ್ರ ಕೆಂಪು ದುಂಡುಅಂಚಿನ ಬಾಬತು ಫರ್ದು ವಂದಕ್ಕೆ	7	8
ಕೆಂಪುಬನಾತು ವಂದಕ್ಕೆ ಸುಮಾರು ಹಳೇದು	6	0
ಜವೆಖಾನ ನೂಲುಯೆಳೆ ಬಾಬತು 1ಕ್ಕೆ	1	8
ಪರಕಾಲೇ ಫರ್ದು 2ಕ್ಕೆ	1	0
ಇದರಮೇಲೆ ಹಚಿವೆಯಲ್ಲಿ ಹಾಕ್ಕಿದ ಮಾಲ್‌ಗಳು ಕರೇ ಹಚಿವೆಪಟ್ಟೆ ಬಾಬತು ಹಸಿವೆ 1ಕ್ಕೆ	0	12
ಶ್ಯಾಲ್ಯದ ಬುಗಡಿ ಅಂಚಿನ ಬಾ॥ ಧೋತ್ರ ಹೊಸದು, ವೊಗದು ಯಿರಲಿಲ್ಲ ಜೊತೆ ವಂದಕ್ಕೆ	12	0
ರುದ್ರಾಕ್ಷೀ ಪಟ್ಟೆ ಕರೇಶೀರೆ ವಂದಕ್ಕೆ	12	0
ಶ್ಯಾಲ್ಯದ ಬುಗಡಿಅಂಚಿನ ಬಜಖಾನೆ ಜೊತೆ 1ಕೆ	3	8
ಕರೇ ಕುಪನ 1ಕ್ಕೆ	1	0
ತಾಂಬ್ರದ ಪುನೆದ ತಂಬಿಗೆ 1, ಬಳಸಿದೆ	3	0
ಡಿಟೋ ಪಂಚಪಾತ್ರೆ ಮದ್ದಗಿರೀದು 1,	1	0
ಫಿರಯಾದಿ ಬಾಬತು, ಸೊಂಟದಲ್ಲಿ ಪಂಚೇಯಲ್ಲಿ ಕಟ್ಟಿದ್ದ ಚಿನ್ನದ ನಗಗಳ ಬಾಬತು ತಪಸೀಲ್.		
ಭಂಗಾರದ ಸರಿಗೆ 1ಕ್ಕೆ ತೊಲೆ 18ಕ್ಕೆ	300	0
ಭಂಗಾರದ ವಂಕಿ ಜೊತೆ 1ಕ್ಕೆ ತೂಕ ತೊ॥ 18	300	0
ಚಿನ್ನದ ಜೋಡು ದುಂಡು ಜೊತೆ 1ಕ್ಕೆ ತೂಕ 9 ತೊಲ್ಲೆ	150	0
ಡಿಟೋ ಪ್ಯೂರ್ಯದ ಜೊತೆ 1ಕ್ಕೆ ತೂ॥ 4½ ತೊ॥	75	0
ಡಿಟೋ ಬೆಳ್ಳಿ ವೊಹರಿನ ಬಾಬತು ವೆಂಗ್ಯ 1ಕ್ಕೆ ಬಿಲ್ಲೆಯಲ್ಲಿ ಬಾಳಬಂದು ಅಕ್ಷರದಿಂದ ಶ್ರೀಲಕ್ಷ್ಮೀವೆಂಕಟೇಶ ಪ್ರಸನ್ನ ಯಂತ ಕೆತ್ತಿದೆ, ಭಂಗಾರ ತೂಕ 5 ವರಹಾ ಬೆಳ್ಳೀ ಚಾಪು ತೊಲೆ ½ಕ್ಕೆ	25	0
ಡಿಟೋ ಸುತ್ತ ಗೊಲ್ಲು 5 ವರಹ ತೂಕದ ಬಾ॥	30	0
ಇದು ಜವಾಯಿ ಸೊಂಟಕ್ಕೆ ಸುತ್ತಿದ್ದ ಹೊಸ ದೋತ್ರ ಕುದುರೆ ಮೇಲೆ ಹಾಕಿದ ಜೊಡೀ ಬಾಬತು ಫರ್ದು 1ಕ್ಕೆ	7	8
ಜುಮ್ಲಾ	964	4

ಮೇಲಿನ ಪಟ್ಟಿಯಲ್ಲಿ ನವಮೂದು ಯಿರುವ ಮಾಲ್‌ಗಳು ಪತ್ತೇಮಾಡಿದವರಿಗೆ ಫಿಧಿಯಾದಿಯಲ್ಲಿ ವಂದುನೂರು ರೂಪಾಯಿ ಇನಾಂ ಕೊಡುವಂತೆ ಮೇಜಸ್ಟ್ರೇಟರ ರೂಬರು ವಾಂಗ್ಮೂಲ ಕೊಟ್ಟು ಯಿರುತ್ತಾರೆ.

MAHOMED ALI,
Police Asstt. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 25ನೇ ... ಸ್ನ 1865ನೇ ಇ॥

ಇದರಿಂದ ತಿಳಿಸುವದೇನಂದರೆ,—ಚಿತ್ರದುರ್ಗ ... ಕಾಳೀ ಪಟ್ಟೆಯದು ಸ್ವದ್ದಿ ಮಾಹೇಯಾನಾ 10 ರೂಪಾಯಿ ತಲಬ್ ಉಳ್ಳ ಕೆಲ್ಸವು ಖಾಲೀ ಯಿರುತ್ತೆ, ಸದರೀ ಉದ್ಯೋಗ ... ಜನಗಳು ತಮ್ಮ ತಮ್ಮ ಅರ್ಜಿಗಳನ್ನು 1876ನೇ ಇಸವೀ ಜೂ॥ 15ನೇ ಮಧ್ಯಾಂನಲ್ಲಾಗಲಿ ಅದಕ್ಕೆ ಮುಂಚೆ ... ಇದರಿಂದ ರುಜು ಮಾಡಿರುವರಿಗೆ ತಲಪುವಂತೆ ಕಳುಬಿಸತಕ್ಕದ್ದು. ಯೂನಿವರ್ಸಿಟಿ ಯಂಟ್ರೆನ್ಸ್ ಯಾ F. A. ಪರೀಕ್ಷೆ ಕೊಟ್ಟು ತೇರಗಡೆಯಾಗಿಯೂ ಮತ್ತು ಅಂತಾ ಪರೀಕ್ಷೆಯೊಳಗೆ ಕನ್ನಡವೆ ಅವರ ಐಚ್ಛಿಕ ಭಾಷೆಯಾಗಿರತಕ್ಕ ಜನಗಳಿಗೆ ಪ್ರಫರೆನ್ಸ್ ಕೊಡಲ್ಪಡುವದು.

...RDAIENGAR,
...charge of Jail.

Notice offering a reward of Rs. 200, for such information as will lead to the detection of perpetrators, and the undermentioned property said to have been stolen by them by burglary in the house of Srinivasaiengar, Revenue Head Munshi, Chitaldroog Deputy Commissioner's Office on the morning of the 25th May 1876.

ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆ॥ಕ॥ ಕೋರ್ಟ್‌ನಿಂದಾ.

ಇದರಿಂದಾ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ॥1876ನೇ ಇಸವಿ ಮೇ 25ನೇ ತಾರೀಖಿನ ಬೆಳಿಗ್ಯೆ ಚಿತ್ರದುರ್ಗ ಡಿಸ್ಟ್ರಿಕ್ಟ್ ರೆವಿನ್ಯೂ ಹೆಡ್ ಮುನಷೀರು ಶ್ರೀನಿವಾಸಯ್ಯಂಗಾರವರ ಮನೆಯಲ್ಲಿ ಕನ್ನ ಜೋರೀ ನಡದು ಈ ಕೆಳಗೆ ಕಾಣಿಸಿರುವ ಮಾಲುಗಳು ಕಳವಾಗಿ ಯಿದೆ.

	ರೂ. ಆ.		ರೂ. ಆ.
ಭಂಗಾರದ ಅಸಲೀ 1ಕ್ಕೆ ವರಹಾ ತೂಕ 30	150 0	ಹಸರುಕಲ್ಲಿನ ಜಡೇಹುವ್ವು 1ಕ್ಕೆ ಭಂಗಾರದ	
ಡಿಟೋ ಬಂದೀ 1ಕ್ಕೆ 60	300 0	ರೇಖು ಹಾಕಿದ ಬಾಬತು.	30 0
ಜೋಮಾಲೆ ಸರ 1ಕ್ಕೆ ಡಿಟೋ ಯಳೆ ನಾ 40		ಭಂಗಾರದ ಜಡೇ ಹುವ್ವು 1ಕ್ಕೆ 3 ವರಹಾ	
ಲ್ಲು ಕರೇಮಣಿ ಹಾಕಿ ಅನಂತನ ಧಾರದಲ್ಲಿ		ತೂಕ.	15 0
ಪೋಣಿಸಿದ್ದು.	200 0	ಬೆಳ್ಳೀ ಮಿಳ್ಳೀ 1ಕ್ಕೆ	5 0
ಮೋರಾಮಾಲೆ ಸರ 1ಕ್ಕೆ ತೂಕ ವರಹಾ 80		ಡಿಟೋ ಕಾಲುಂಗರ 4ಕ್ಕೆ	18 0
ಅದದು 60 ಕಾಸು ಪ್ರತಿ ಕಾಸಿನಲ್ಲಿಯು ಶ್ರೀರಾ		ಡಿಟೋ ಡಬ್ಬಿ 1ಕ್ಕೆ	3 0
ಮ "ಶ್ರೀರಾಮ ಸಹಾಯವೆಂದು" ತೆಲುಗು ಅ		ಹಿತ್ತಾಳೀ ಡಬ್ಬಿ 1ಕ್ಕೆ	0 8
ಕ್ಷರದಲ್ಲಿ ಬರದು ಯಿದೆ ಸೀತಾರಾಮ ಲಕ್ಷ್ಮಣ		ಪೀತಾಂಬರದ ರವಿಕೆ 1ಕ್ಕೆ	5 0
ಪ್ರಥಿಮೆ ಇಧೆ.	4 00 0	ಸಾದಾ ರೆಷ್ಮೀ ಕೆಂಪು ಚೌಕಳೀ ಖಣ 1ಕ್ಕೆ	1 0
ಪಾಂಜೀ ಜೊತೆ 1ಕ್ಕೆ ತೂಕ 20 ವರಹಾ	100 0	ಸಣ್ಣ ಬೆಳ್ಳೀ ದೊನ್ನೆ 1ಕ್ಕೆ	3 0
ಮುತ್ತಿನ ಬುಗಡೀ ಜೊತೆ 1ಕ್ಕೆ	600 0	ನಗದು ರೂಪಾಯಿ.	40 0
ವಜ್ರದ ಚಂದ್ರಮುರು ಜೊತೆ 1ಕ್ಕೆ ದರ		ವಾಲೆಗೆ ಹಾಕತಕ್ಕ ಕೀಮೇ ಮುತ್ತಿನ ಸರ	
1ಕ್ಕೆ ವಜ್ರ 10 ಕೆಂಪ್ಪು 3 ಈ ಪ್ರಕಾರ ವಜ್ರ		ಭಂಗಾರದ ಗುಂಡು 4 ಹಾಕಿದ ಬಾಬತು.	4 0
20 ಕೆಂಪ್ಪು 6.	600 0		
ಪೊಂಬಾಇ ಬಳಿ ಜೊತೆ 1ಕ್ಕೆ	30 0	ಜುಮ್ಲಾ	26048

1863ನೇ ಈ ಮಾಲುಗಳನ್ನು ಅಪರಾಧಿಗಳನ್ನು ಪತ್ತೇಮಾಡುವವರಿಗೆ (200) ರೂಪಾಯಿಗಳ ಇನಾಮುನ್ನು ಮಾಲೀಕರು ಪಾವತೀ ಸ್ಲೇ ಪಟ್ಟಿಯು ರು.

ಈ ಮಾಲುಗಳಪೈಕೀ ಯಾವದನ್ನಾ ಯಾವಗಳನ್ನಾದರೂ ಪತ್ತೇ ಮಾಡಿಕೊಟ್ಟವರಿಗೆ 200 ರುಪಾಯಿನಲ್ಲಿ ದಾವ್ಯಾಪಾಯಿ ಪ್ರಕಾರ ಇನಾಂ ದೊರಕೀತು.

ಬತಾರೀಖು 26ನೇ ಮೇ 1876. ಚಿತ್ರದುರ್ಗ.

E. F. H. ARMSTRONG,
Dy. Commr.

COORG.

Notice inviting claimants against the estate of the late Dále Gaudana Madaiya, to file their claims in the Court of the Superintendent at Coorg.

ಕೊಡಗು ಸೂಪರ್‌ಟೆಂಡೆಂಟ್ ಕೋರ್ಟ್‌ನಿಂದ.

ಸರ್ವಜನರಿಗೂ ತಿಳಿಯಪಡಿಸುವದೇನಂದರೆ,—ಕಿಗ್ಗಟ್ಟುನಾಡು ತಾಲ್ಲೂಕು ಪೈಕೀ ತಾವಳಗೇರಿ ಮೊರ್ನಾಡು ನಾಲ್ಕೇರಿ ಗ್ರಾಮದಲ್ಲಿ ಅನಾಥನಾಗಿದ್ದ ಕೆವಾಬಾರದ ದಾಳಿಗೌಡನ ಮಾದಯ್ಯನು ಫೌತೀಆದ್ದಾಗಿ ತಿಳಿದಿದೆ. ಯಿವನ ಬಾಬತು ಜೆಂದಗಿಗೆ ಯಾರಾದರೂ ವಾರಸ್‌ದಾರರು ಯಿದ್ದರೆ ಈ ತಾರೀಖು ಲಾಗಾಯತು 6 ತಿಂಗಳ ವಳಗೆ ಯಿದಕ್ಕೆ ಬಾಧ್ಯತೆ ಪುಳ್ಳವರು ಕೊಡಗು ಸೂಪರ್‌ಟೆಂಡೆಂಟ್ ಕಚ್ಚೇರಿಗೆ ಹಾಜರಾಗಿ ಕ್ರಮವಾದ ದಾವಾದಿಂದ ತಮ್ಮ ಹಕ್ಕು ಸ್ಥಿರವಡಿಸಿ ಕೊಳ್ಳತಕ್ಕದ್ದು. ಆ ರೀತಿ ವಾಯಿದೆ ವಳಗೆ ದಾವಾ ದಾಖಲ್ ಮಾಡದೆ ಹೋದರೆ ಮೂಲ್ ಸ್ಥಿತಿ ಸಹಾ ಕ್ರಯಪಡಿಸಿ ಸರಕಾರಕ್ಕೆ ಮೊಬಲಗು ದಾಖಲ್ ಮಾಡಿ ಕೊಳ್ಳಲಾಧೀತು.

ಮಾಲ್ ತಪಸೀಲ್.

	ರೂ.	ಆ.	ಪೈ.
ಭೂಮಿ ಬಟ್ಟಿ 981¼ಗೆ ..	981	4	0
ತೋಟ ವಂದಕ್ಕೆ ..	50	0	0
ಹಜೂರ್ ಖಜಾನೇಯಲ್ಲಿ ಯಿರುವದು ..	537	9	4
ಯಿದಕ್ಕೆ ತಪಸೀಲ್.			
ಚಿನ್ನದ ನಗದ ಕ್ರಯ ..	339	9	4
ಬೆಳ್ಳೀ ನಗದ ಕ್ರಯ ..	198	0	0
ನಗದು ರೂಪಾಯಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಯಿರುವದು ..	1028	5	0

	ರೂ.	ಆ.	ಪೈ.
ಸದರೀ ಖಜಾನೇಲಿ ಅವಾನಕ್ತು ಇರುವದು	241	12	2
ತಾಲ್ಲೂಕು ಕಚ್ಚೇರಿಲಿ ಯಿರುವದು ..	10	9	4
ಮಹದೇವಪೇಟೆ ಕಚೇರಿಲಿ ನಗದು ಯಿರುವದು	5	8	2
ಯಿವನ ಬಾಬತು ಹಾಸಿಗೆ ವಗೈರೇ ಕ್ರಯ ಗೊತ್ತಿಲ್ಲ.	0	0	0
ಜುಮ್ಲಾ	2855	0	0

ಬತಾರೀಖು 16ನೇ ಮೇ ಸ॥ 1876ನೇ ಇಸವಿ.

E. SHAW,
Offg. Supt.

ಕರೆನ್ಸೀ ನೋಟ್‌ಗಳು.

ಇದರಡಿ ನಮೂದಿಸಲ್ಪಡುವ ಕರೆನ್ಸಿನೋಟುಗಳ ಬಲಭಾಗವು ಮಾಹೇ ಮಜಕೂರು 5ನೇ ತಾರೀಖಿನಲ್ಲಿ ಹೋಗಿವೆ.

ನಂಬರು	ಸರ್ಕಲ್	ಮೊಬಲಗ್	
B 41157	ಮದ್ರಾಸ್	100	ಹಕ್ಕುದಾರನ ಹೆಸರು ಬೆಂಗಳೂರಲ್ಲಿರುವ ಚಿಕ್ಕ ಮಗಳೂರು ಜನ್ನ ವೀರೇಗೌಡ.
B 44 13281	ಡಿಟೋ	100	

ಯಿದರಡಿ ಬರುವ ಕರೆನ್ಸಿನೋಟು ಮಾಹೇ ಮಜಕೂರು 22 ರಲ್ಲು ಹೋಗಿರುತ್ತೆ.

ನಂಬರು	ಸರ್ಕಲ್	ಮೊಬಲಗ್	
B 34 08112	ಮದರಾಸ್	10	ಹಕ್ಕುದಾರ, ಕೋಲಾರ ತಾ॥ ಪೇಷ್ಕಾರ್ ಅಬ್ದುಲ್‌ರಜಾಕ್‌ಯವರು.

ತಾರೀಖು 18ನೇ ಮೇ 1876.

ಈಕೆಳಗೆ ನಮೂದಿರಲ್ಪಡುವ ಕರೆನ್ಸಿ ನೋಟ್ ಸ॥ 1876ನೇ ಯಿಸವಿ ಯೇಪ್ರಿಲ್ 5ನೇತಾರೀಖಿನಲ್ಲಿ ಕಳಿಯಲ್ಪಟ್ಟಿತು ಅದನ್ನು ಬರಮಾಡಿಕೊಟ್ಟವರಿಗೆ 25 ರೂಪಾಯಿ ಇನಾಂ ಕೊಡುವದಾಗಿ ಮಾಲೀಕರು ತಿಳಿಸುತ್ತಾರೆ

ನಂಬರು	ಸರ್ಕಲ್	ಮೊಬಲಗ್	
B 44 55976	ಡಿಟೋ	100	ಹಕ್ಕುದಾರ ಚಿಕ್ಕ ಮಗಳೂರು ತಾ॥ ಮೈಲೀಮನೆ ಮೆ॥ ಜೆ. ಕ್ಯಾಸ್ ಸಾಹೇಬರು.

ಈಕೆಳಗೆ ನಮೊದಿಸಲ್ಪಡುವ ಕರೆನ್ಸಿನೋಟುಗಳ ಅರ್ಧಭಾಗವು ಹೋಗಿರುತ್ತೆ.

ನಂಬರು	ಸರ್ಕಲ್	ಮೊಬಲಗ್	
B 42 17950 ಬಲಭಾಗ	ಡಿಟೋ	20	ಹಕ್ಕುದಾರ ಚಿಕ್ಕ ಮಗಳೂರು ತಾ॥ ಬಸವನಹಳ್ಳೀಲಿರುವ ಕಡೂರು ಡಿ॥ ಜೈಲ್ ಮುತ್ಸದಿ ನಂಜುಂಡೈಯ.
B 42 17951 ಯಡಭಾಗ	ಡಿಟೋ	20	

ಲಾಲ್ ಬಾಗ್.

ತಾರೀಖು 29ನೇ ಮೇ 1876.

ಸುಮಾರು 70 ಮಣುಗಳು ಇಂಗ್ಲಿಷ್ ವ ಅಮರಿಕ ಉರಳಗಡ್ಡೆಗಳು ಬಾಲ್ ಬಾಗಿನಲ್ಲಿ 1876ನೇ ಇಸವಿ ಜೂ॥ 5ನೇ ಮುರ್ಕುಂ ಸೋಮವಾರ ಬೆಳ್ಗ್ಯೆ ಸರಿಯಾಗಿ 8 ಘಂಟೆಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು ಈ 13 ಜಾತಿಗಳು ಪ್ರತ್ಯೇಕ ಪ್ರತ್ಯೇಕ ಲಾಟುಗಾ ವಿಕ್ರಯಿಸಲ್ಪಡುವವು ಷರತ್ತುಗಳು ನಗದು ಮೊಬಲಗು.

J. CAMERON,
Superintendent.